ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

1) ಪ್ರಾಥಮಿಕ ಶಿಕ್ಷಕರುಗಳಿಗೆ 3 ತಿಂಗಳುಗಳು ಹಾಗೂ

2) ಪ್ರೌಢ ಶಾಲಾ ಶಿಕ್ಷಕರುಗಳಿಗೆ 2 ತಿಂಗಳುಗಳ ವೇತನ ಬಾಕಿ ಇರುತ್ತದೆ.

2) ಅನುದಾನ ಕೊರತೆಯಿಂದ

3) ಹೆಚ್ಚುವರಿ ಆಯವ್ಯಯ ಬಿಡುಗಡೆಯು ಸರ್ಕಾರದ ಪರಿಶೀಲನೆಯಲ್ಲಿದ್ದು, ಸಧ್ಯದಲ್ಲಿಯೇ ಬಿಡುಗಡೆ ಮಾಡಲಾಗುವುದು.

ತೀರ್ಥಹಳ್ಳಿ ಜೆ.ಸಿ.ಆಸ್ಪತ್ರೆ ಕಟ್ಟಡದ ಕಾಮಗಾರಿ

673 (1113) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ತೀರ್ಥಹಳ್ಳಿಯಲ್ಲಿ ಕರ್ನಾಟಕ ಆರೋಗ್ಯ ಪದ್ದತಿ ಯೋಜನೆಯಡಿ ಕಟ್ಟುತ್ತಿರುವ ಜೆ.ಸಿ.ಆಸ್ಪತ್ರೆಯ ಅಂದಾಜು ಮೊತ್ತವೆಷ್ಟು?

ಆ) ಕಟ್ಟಡ ಕಾಮಗಾರಿಯ ನಿರ್ಮಾಣ ಅವಧಿ ಎಷ್ಟು?

ಇ) ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು?

ಈ) ಇದುವರೆಗೂ ಖರ್ಚಾದ ಮೊತ್ತವೆಷ್ಟು? ಖರ್ಚು ಮಾಡಲಾದ ಅನುದಾನವನ್ನು ಯಾವ ಯಾವ ಬಾಬುಗಳಿಗೆ ಖರ್ಚು ಮಾಡಲಾಗಿದೆ?

ಉ) ಕಾಮಗಾರಿ ಎಂದು ಪೂರ್ಣಗೊಳ್ಳುತ್ತದೆ?

ಡಾ॥ ಎ.ಬಿ.ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರೂ. 18 1.42 ಲಕ್ಷಗಳು

ಆ) ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿ ಪಡಿಸಿರುವ ಗುತ್ತಿಗೆ ಅವಧಿ 18 ತಿಂಗಳು.

ಇ) ರೂ. 163. 50 ಲಕ್ಷಗಳು.

ಈ) ರೂ. 163. 50 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಈ ಆಸ್ಪತ್ರೆಗೆ ಅಗತ್ಯವಿರುವ 2 143 ಚಮೀ ಹೊಸ ಕಟ್ಟಡ ನಿರ್ಮಿಸಿದ್ದು ಇದರಲ್ಲಿ ಆಸ್ಪತ್ರೆಯ ಈಗಿನ 50 ಹಾಸಿಗೆಗಳ ಸೌಲಭ್ಯದಿಂದ 100 ಹಾಸಿಗೆಗಳ ಸೌಲಭ್ಯಕ್ಕೆ ಅಗತ್ಯವಿರುವ ವಾರ್ಡ್‌ಗಳು, ಹೊರರೋಗಿಗಳ ವಿಭಾಗ, ತುರ್ತು ಚಿಕಿತ್ಸಾ ವಿಭಾಗ, ಶಸ್ತ್ರಚಿಕಿತ್ಸಾ ಕೊಠಡಿ, ಆಡಳಿತ ಕಛೇರಿ, ಕ್ಷ-ಕಿರಣ, ವಿಭಾಗ ಮತ್ತು ಫಾರ್ಮಸಿ ವಿಭಾಗಗಳನ್ನು ನಿರ್ಮಿಸಲಾಗಿದೆ.

ಅಲ್ಲದೆ ಈ ಕೆಳಗೆ ಕಾಣಿಸಿರುವ ಸೌಲಭ್ಯಗಳನ್ನು ಸಹಾ ಒದಗಿಸಲಾಗಿದೆ.

2 ವೈದ್ಯರುಗಳ ವಸತಿ ಗೃಹ ಮತ್ತು 2 ದಾದಿಯರ ವಸತಿ ಗೃಹಗಳ ನಿರ್ಮಾಣ, ಹಳೆ ಆಸ್ಪತ್ರೆ ಹಾಗೂ ಹಾಲಿ ಇರುವ ವಸತಿಗೃಹಗಳ ನವೀಕರಣ, ಹೊಸ ವಿದ್ಯುತ್ ವ್ಯವಸ್ಥೆ, ನೀರು ಸರಬರಾಜಿಗೆ ನೆಲ ತೊಟ್ಟಿ

ಮತ್ತು ಮೇಲು ತೊಟ್ಟಿ ನಿರ್ಮಾಣ, ಒಳ ಮತ್ತು ಹೊರ ನೀರು ಸರಬರಾಜು ವ್ಯವಸ್ಥೆ ಹಾಗೂ ನೈರ್ಮಲೀಕರಣದ ವ್ಯವಸ್ಥೆ.

ಊ) ಕಾಮಗಾರಿಯನ್ನು ಜುಲೈ 2001ಕ್ಕೆ ಎಲ್ಲಾ ರೀತಿಯಲ್ಲೂ ಪೂರ್ಣಗೊಳಿಸಲಾಗುವುದು.

ರಾಜ್ಯದಲ್ಲಿ ಬಿ.ಪಿ.ಎಲ್. ಪಟ್ಟಿ ಯ ತಯಾರಿ

674(1114) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ತಾಲ್ಲೂಕಿನಲ್ಲಿ ಬಿ.ಪಿ.ಎಲ್. ಪಟ್ಟಿಯ ಸಿದ್ಧತೆ ಪೂರ್ಣಗೊಂಡಿದೆ, ಹಾಗೂ ತೀರ್ಥ ಮತ್ತು ತಾಲ್ಲೂಕಿನ ಪಟ್ಟಿ ಎಲ್ಲಾ ಹಂತದಲ್ಲೂ ಪೂರ್ಣಗೊಂಡಿದೆಯೇ?

ಆ) ಬಿ.ಪಿ.ಎಲ್. ಪಟ್ಟಿ ಆಧಾರದ ಮೇಲೆ ಸರ್ಕಾರದಿಂದ ಯಾವ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ?

ಇ) ಬಿ.ಪಿ.ಎಲ್. ಪಟ್ಟಿ ತಯಾರಾಗಿಲ್ಲವೆಂಬ ಕಾರಣಕ್ಕಾಗಿ ಸರ್ಕಾರದ ಯಾವುದಾದರೂ ಯೋಜನೆಯು ಅನುಷ್ಠಾನಗೊಳ್ಳದೇ ಬಾಕಿ ಇರುತ್ತದೆಯೇ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) 1997 ರ ಕೇಂದ್ರ ಸರ್ಕಾರದ ಮಾರ್ಗ ಸೂಚಿ ಪ್ರಕಾರ 9 ನೇ ಯೋಜನಾವಧಿ 1997-98 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಬಿ.ಪಿ.ಎಲ್ ಪಟ್ಟಿಯ ಸಿದ್ಧತೆ ಪೂರ್ಣಗೊಂಡಿದೆ.

ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಬಿಪಿ ಎಲ್ ಪಟ್ಟಿ ಪೂರ್ಣಗೊಂಡಿದೆ.

ಆ) ಬಿ.ಪಿ.ಎಲ್. ಪಟ್ಟಿ ಆಧಾರದ ಮೇಲೆ ಎಸ್ ಜಿ ಎಸ್ ವೈ, ಮುಂತಾದ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಇಲ್ಲ.

ಕಾಲೇಜುಗಳಿಗೆ ಕಟ್ಟಡ ಸೌಲಭ್ಯ ಒದಗಿಸುವುದು

676 (1104) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

1) ರಾಜ್ಯದಲ್ಲಿನ ಬಹುತೇಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಟ್ಟಡ ಸೌಲಭ್ಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ಈ ಕೊರತೆ ನಿವಾರಿಸಲು ಸರ್ಕಾರದ ಉದ್ದೇಶಿತ ಕ್ರಮಗಳೇನು?